ಭೂಮಿ ಇರುವುದೊಂದೇ ಉಳಿಸೋಣ ಬನ್ನಿ ನಾವಿಂದೇ

# ಪರಿಸರಕ್ಕಾಗಿ ನಾವು

## ಪರಿಸರ ಕಾರ್ಯಕರ್ತರ ರಾಜ್ಯ ಸಂಘಟನೆ

ಸಂಪರ್ಕಕ್ಕೆ ಫೋನ್ ನಂಬರ್ : +91 94835 26611, +919900690913 email: parisarakkaaginaavu@gmail.com

**ಅಧ್ಯಕ್ಷರು :**
ಎ ಟಿ ರಾಮಸ್ವಾಮಿ
**ಕಾರ್ಯಾಧ್ಯಕ್ಷರು:**
ಆಂಜನೇಯ ರೆಡ್ಡಿ ನೀರಾವರಿ
**ಉಪಾಧ್ಯಕ್ಷರು:**
ಕವಿತ ಎ ಎಸ್ ಎಲೇದಹಳ್ಳಿ
**ಪ್ರಧಾನ ಕಾರ್ಯದರ್ಶಿಗಳು:**
ಪರಶುರಾಮೇಗೌಡ
ಪಾರ್ವತಿ ಶ್ರೀರಾಮ್
**ಕಾನೂನು ಸಲಹೆಗಾರರು :**
ಬಸವಪ್ರಭು ಹೊಸಕೇರಿ
**ಮಾಧ್ಯಮ ಸಲಹೆಗಾರರು :**
ಕುಸುಮ ಆಯರಹಳ್ಳಿ
**ಕಚೇರಿ ಕಾರ್ಯದರ್ಶಿ:**
ಮಹೇಶ್ ಬಸಾಪುರ
**ರಾಜ್ಯ ಸಂಘಟನಾ ಕಾರ್ಯದರ್ಶಿಗಳು:**
ಸರಸ್ವತಿ ಪೂಜಾರ
ಮಮತಾರಾಣಿ ಎಸ್ ಎನ್
ಶೇಖರ್ ಗೌಳೇರ್
ಕಾಶಿನಾಥ್ ಪಾಟೀಲ್
ಸಿಕಂದರ್ ಸಿ ಎಚ್
**ರಾಜ್ಯ ಕಾರ್ಯದರ್ಶಿಗಳು :**
ಗಂಟಯ್ಯ
ಶ್ರೀಶೈಲ ಆಲದಹಳ್ಳಿ
ಡಾ ಪ್ರಶಾಂತ್ ಕೇಣಿ
ಸತ್ಯಮೂರ್ತಿ
ಟಿ ಶಿವರುದ್ರಪ್ಪ
ಸಿ. ಬಿ. ಮಂಜುಳಾ
ಎಂ ಜಿ ಮನೋಜ್
ಅರ್ಚನಾ ರಾವ್
ಬಿ ಎನ್ ಸುರೇಶ್ ಬಾಬು
ಶ್ರೇಣಿಕ್ ರೋಖಡೆ
ಆರ್ ಎನ್
ವೇಣುಗೋಪಾಲ್
ಮೋಹನ್ ಎಸ್ ಸರ್ವಿ
ಮಂಜುನಾಥ
ಸಣ್ಣಿಂಗಣ್ಣನವರ
ನಿರ್ಮಲ ಹಿರೇಗೌಡರ
ಸುರೇಂದ್ರ ಸುಂದರವನ
ಜಬೀವುಲ್ಲಾ
ಎಂ ಪಾಪೇಗೌಡ
ಸುಂದರೇಶ್
**ಖಜಾಂಚಿಗಳು:**
ಎಚ್ ಕೆ ಗೌಡಯ್ಯ

ದಿನಾಂಕ: 29-4-2025
ಬೆಂಗಳೂರು

ಇವರಿಗೆ,

**ಸನ್ಮಾನ್ಯ ಶ್ರೀ ಈಶ್ವರ ಖಂಡ್ರೆ**
ಕರ್ನಾಟಕದ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

ಮಾನ್ಯರೆ,

**ವಿಷಯ: ಬೆಂಗಳೂರಿನ ಕಂಟೋನ್ಮೆಂಟ್ ರೈಲ್ವೆ ಕಾಲೋನಿಯಲ್ಲಿ 368 ಬೃಹತ್ ಮರಗಳನ್ನು ಕಡಿಯದೆ / ತೆರವುಗೊಳಿಸದೆ ಉಳಿಸಿಕೊಳ್ಳಲು ಮಾಡುವ ಮನವಿ.**

ಉಲ್ಲೇಖ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇವರು ಪತ್ರಿಕೆಯಲ್ಲಿ ಕೊಟ್ಟಿರುವ ಸಾರ್ವಜನಿಕ ಪ್ರಕಟಣೆ ಸಂಖ್ಯೆ ನಂ. ಡಿಸಿಎಫ್/ ಪಿಆರ್ 185/2025-26, ದಿ.25-4-25.

ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇವರು ದಿನಾಂಕ 25-4-2025ರಂದು ನೀಡಿರುವ ಸಾರ್ವಜನಿಕ ಪ್ರಕಟಣೆಯಲ್ಲಿ, ಬೆಂಗಳೂರು ಕಂಟೋನ್ಮೆಂಟ್ ರೈಲ್ವೆ ಕಾಲೋನಿಯಲ್ಲಿ ವಾಣಿಜ್ಯ ಅಭಿವೃದ್ಧಿ ಯೋಜನೆಗಾಗಿ, ಈ ಆವರಣದಲ್ಲಿ ಬೆಳೆದಿರುವ 368 ಬೃಹತ್ ಮರಗಳನ್ನು ತೆರವುಗೊಳಿಸುವಂತೆ ರೈಲ್ವೆ ಇಲಾಖೆಯವರು ಕೋರಿದ್ದಾರೆ ಎಂದು ತಿಳಿಸಿ, ಈ ಬಗ್ಗೆ ನಾಗರಿಕರಿಂದ ಸಲಹೆಗಳು/ ಆಕ್ಷೇಪಣೆಗಳು / ಅಭಿಪ್ರಾಯಗಳನ್ನು ಆಹ್ವಾನಿಸಿದ್ದಾರೆ.

ನೀವು ಇತ್ತೀಚಿಗೆ ಮಂಡ್ಯ , ಮೈಸೂರು ಮುಂತಾದ ಕಡೆ ಮರಗಳನ್ನು ಕಡಿದಿದ್ದ ಕಾರಣದಿಂದ ವ್ಯಕ್ತವಾಗಿದ್ದ ವ್ಯಾಪಕ ಪ್ರತಿಭಟನೆ ಮತ್ತು ಆಕ್ರೋಶಗಳನ್ನು ಗಮನಿಸಿದ ತಕ್ಷಣ ಈ ಬಗ್ಗೆ ಇಲಾಖೆಯ ಉನ್ನತ ಅಧಿಕಾರಿಯಿಂದ ತನಿಖೆಗೆ ಆದೇಶಗಳನ್ನು ನೀಡಿದ್ದೀರಿ. ಈ ಆದೇಶಗಳಲ್ಲಿ ಘನ ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿರುವ ಅಭಿಪ್ರಾಯ: "Cutting down large number of trees is like killing human beings, or worse than that" ಇದನ್ನು ಕೂಡ ಉಲ್ಲೇಖಿಸಿದ್ದೀರಿ. ನಿಮ್ಮ ಈ ತ್ವರಿತ ಸ್ಪಂದನೆ ನಿಮಗಿರುವ ಪರಿಸರ ಕಾಳಜಿಯನ್ನು ತೋರಿಸುತ್ತದೆ ಎಂದು ನಾವು ಭಾವಿಸುತ್ತೇವೆ ಮತ್ತು ನಿಮ್ಮ ಈ ನಿಲುವಿಗೆ ಸಾರ್ವಜನಿಕರಿಂದಲೂ ಸಾಕಷ್ಟು ಮೆಚ್ಚುಗೆ ವ್ಯಕ್ತವಾಗಿದೆ. ಆದರೆ ನಿಮ್ಮ ಈ ಉಪಕ್ರಮಗಳು ಮರಗಳನ್ನು ಕಡಿದ ನಂತರ ತನಿಖೆಗೆ ಸಂಬಂಧಪಟ್ಟಿವೆ.

ಈಗ ಬೆಂಗಳೂರಿನ ಕಂಟೋನ್ಮೆಂಟ್ ರೈಲ್ವೆ ಕಾಲೋನಿಯಲ್ಲಿ ಬೃಹದಾಕಾರವಾಗಿ ಬೆಳೆದು ನಿಂತಿರುವ 368 ಮರಗಳನ್ನು ಉಳಿಸಿಕೊಂಡು ಪರಿಸರ ಸಂರಕ್ಷಣೆ ವಿಷಯದಲ್ಲಿ ನಿಮಗಿರುವ ಬದ್ಧತೆ ಮತ್ತು ಕಾಳಜಿಯನ್ನು ತೋರಿಸುವ ಸದವಕಾಶ ನಿಮಗೆ ಒದಗಿ ಬಂದಿದೆ.

ಒಂದು ಕಾಲದಲ್ಲಿ ಉದ್ಯಾನ ನಗರಿ ಎಂದು ಖ್ಯಾತಿ ಪಡೆದಿದ್ದ ಬೆಂಗಳೂರಿನ ಈಗಿನ ಸ್ಥಿತಿ ಬಗ್ಗೆ ನಿಮಗೆ ಹೇಳಬೇಕಿಲ್ಲ. ಬೆಂಗಳೂರಿನ ಮರಗಳ ಸಂಖ್ಯೆ ದಿನೇದಿನೇ ಕ್ಷೀಣಿಸುತ್ತಿದೆ. ಈಗ ಕಡಿಯಲು ಹೊರಟಿರುವ 368 ಮರಗಳಲ್ಲಿ ಹಲವು ಮರಗಳು ಪಾರಂಪರಿಕ ಮರಗಳೆಂದು (ಹೆರಿಟೇಜ್) ಕರೆಯಬಹುದಾದವು. ದೆಹಲಿಯಲ್ಲಿ ಆಗಲೇ ಉಸಿರಾಟದ ತೊಂದರೆ ಉಂಟಾಗಿದೆ. ಜಾಗತಿಕ ತಾಪಮಾನ ವಿಪರೀತ ಏರುತ್ತಿದ್ದು, ಇರುವ ಮರಗಳನ್ನು ಉಳಿಸಿಕೊಂಡು, ಗಿಡಗಳನ್ನು ನೆಟ್ಟು ಬೆಳೆಸಬೇಕಾದ ತುರ್ತು ಪರಿಸ್ಥಿತಿಲ್ಲಿ ನಾವಿದ್ದೇವೆ. ಹೀಗಿರುವಾಗ ನೂರಾರು ಬೃಹತ್ ಮರಗಳನ್ನು, ಅದೂ ವಾಣಿಜ್ಯ ಉದ್ದೇಶಕ್ಕಾಗಿ ಕಡಿಯಲು ಹೊರಟಿರುವುದು ಯಾವುದೇ ಕಾರಣಕ್ಕೂ ಸಮರ್ಥನೀಯವಲ್ಲ.

ಬೆಂಗಳೂರಿನ ವಾಯುಮಾಲಿನ್ಯ, ಜನ ಮತ್ತು ವಾಹನ ದಟ್ಟಣೆಯ ಹಿನ್ನೆಲೆಯಲ್ಲಿ ಸದರಿ ಮರಗಳನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಸರ್ಕಾರದ ಎಲ್ಲಾ ಯೋಜನೆಗಳು ಇನ್ನು ಮುಂದೆ ಪರಿಸರ ಸ್ನೇಹಿ ಆಗಿರಬೇಕಾದ ಅನಿವಾರ್ಯತೆ ಇದೆ. ಈಗ ಸದರಿ ಮರಗಳನ್ನು ಕಡಿಯದಂತೆ ತಡೆಯುವ ಒಳ್ಳೆಯ ಕೆಲಸದ ಅವಕಾಶ ನಿಮ್ಮ ಮುಂದಿದೆ.

ಈ ಬಗ್ಗೆ ತಾವು ತೆಗೆದುಕೊಂಡ ಕ್ರಮಗಳ ಮಾಹಿತಿಯನ್ನು ನನಗೆ ಒದಗಿಸಲು ಕೋರುತ್ತೇನೆ.

ಗೌರವಪೂರ್ವಕ ವಂದನೆಗಳು.

ತಮ್ಮ ವಿಶ್ವಾಸಿಗಳು

**(ಎ ಟಿ ರಾಮಸ್ವಾಮಿ)**
**ಅಧ್ಯಕ್ಷರು**
**‘ಪರಿಸರಕ್ಕಾಗಿ ನಾವು’ ಸಂಘಟನೆ**

ಪ್ರತಿ : ಶ್ರೀ ಸಿದ್ದರಾಮಯ್ಯನವರು, ಮಾನ್ಯ ಮುಖ್ಯಮಂತ್ರಿಗಳು, ವಿಧಾನಸೌಧ, ಬೆಂಗಳೂರು
ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.